DV3-(44)

# ಕರ್ನಾಟಕ ಸರ್ಕಾರ

## ನಿರ್ದೇಶಕರ ಕಛೇರಿ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು

# ಸಿಎ3, ಖಜಾನೆ ಬಡಾವಣೆ, ಕೇರ್ಗಳ್ಳಿ ಮೈಸೂರು-570026, ದೂರವಾಣಿ; 0821-2560275, ಇ-ಮೇಲ್-trimysore@gmail.com

ಟಿಆರ್ಐ/ಮೈ/ಸಂವಿ/ಸಿಆರ್-30/2020-21 ದಿನಾಂಕ: 02/11/2022.

### -: ಕಚೇರಿ ಆದೇಶ :-

ವಿಷಯ:- "ಭಾರತದಲ್ಲಿ ಬುಡಕಟ್ಟುಗಳ ಸಾಂಪ್ರದಾಯಿಕ ಜೀವನೋಪಾಯದ ಸುಸ್ಥಿರ ಅಭಿವೃದ್ಧಿ" ಎಂಬ ವಿಷಯ ಕುರಿತು 02 ದಿನಗಳ ರಾಷ್ಟ್ರೀಯ ವಿಚಾರಸಂಕಿರಣ ಆಯೋಜಿಸಲು ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:- 1. ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ನವದೆಹಲಿ ಇವರ ಪತ್ರ ಸಂಖ್ಯೆ 11031/11/2020 ಟಿಆರ್ಐ, ದಿನಾಂಕ: 15/03/2021.

2. ಪ್ರಾಧ್ಯಾಪಕರು, ಕಾನೂನು ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಇವರ ಪತ್ರ ಸಂಖ್ಯೆ ಪಿಜಿಎಲ್/287/2022-23, ದಿನಾಂಕ: 28/10/2022.

3. ಈ ಕಚೇರಿಯ ದಿನಾಂಕ: 31/10/2022ರ ಸಮಸಂಖ್ಯೆ ಪತ್ರ.

********

ಉಲ್ಲೇಖ (1)ರ ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ನವದೆಹಲಿ ಇವರ ಪತ್ರದಲ್ಲಿ "ಭಾರತದಲ್ಲಿ ಬುಡಕಟ್ಟುಗಳ ಸಾಂಪ್ರದಾಯಿಕ ಜೀವನೋಪಾಯದ ಸುಸ್ಥಿರ ಅಭಿವೃದ್ಧಿ" ( Narional Seminar on Sustainable Development of Traditional Livelyhood of tribes in India ) ಎಂಬ ವಿಷಯ ಕುರಿತು 02 ದಿನಗಳ ರಾಷ್ಟ್ರೀಯ ವಿಚಾರಸಂಕಿರಣ ಆಯೋಜಿಸಲು ಕ್ರಮ ವಹಿಸಲಾಗಿದೆ.

ಉಲ್ಲೇಖ (2)ರ ಪತ್ರದಲ್ಲಿ ಪ್ರಾಧ್ಯಾಪಕರು, ಕಾನೂನು ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಇವರು ಮೇಲ್ಕಂಡ ಎರಡು ದಿನಗಳ ರಾಷ್ಟ್ರೀಯ ವಿಚಾರಸಂಕಿರಣವನ್ನು ಕೇಂದ್ರ ಸರ್ಕಾರದ ಕಾರ್ಯಕ್ರಮವಾದ '**ಆಜಾದಿ ಕಾ ಅಮೃತ್ ಮಹೋತ್ಸವ್**' ಅಂಗವಾಗಿ ದಿನಾಂಕ: 16/12/2022 ಮತ್ತು 17/12/2022 ರಂದು ಮೈಸೂರು ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಆಯೋಜಿಸಲು ಅವಕಾಶ ನೀಡಿ, ಈ ಸಂಬಂಧ ರೂ. 5.00 ಲಕ್ಷಗಳ ಅನುದಾನ ಬಿಡುಗಡೆ ಮಾಡಿಕೊಡಲು ಕುಲಸಚಿವರ ಮೂಲಕ ಕೋರಿದ್ದು, ಉಲ್ಲೇಖ (3)ರ ಈ ಕಚೇರಿ ಪತ್ರದಲ್ಲಿ ಎರಡು ದಿನಗಳ ರಾಷ್ಟ್ರೀಯ ವಿಚಾರಸಂಕಿರಣವನ್ನು ಕೇಂದ್ರ ಸರ್ಕಾರದ ಕಾರ್ಯಕ್ರಮವಾದ '**ಆಜಾದಿ ಕಾ ಅಮೃತ್ ಮಹೋತ್ಸವ್** ಅಂಗವಾಗಿ ದಿನಾಂಕ: 16/12/2022 ಮತ್ತು 17/12/2022 ರಂದು ಮೈಸೂರು ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಆಯೋಜಿಸಲು ಅನುಮೋದನೆ ನೀಡಲಾಗಿದೆ.

ಮೇಲ್ಕಂಡ ವಿಚಾರ ಸಂಕಿರಣ ಅಯೋಜನೆಗಾಗಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಮತ್ತು ಎಸ್.ಎನ್.ಎ. ಖಾತೆಯಲ್ಲಿರುವ ರೂ. 5.00 ಲಕ್ಷಗಳ ಅನುದಾನವನ್ನು ಕುಲಸಚಿವರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಇವರಿಗೆ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿ ಆದೇಶಿಸಿದೆ, ಈ ಅನುದಾನವನ್ನು ಕೆಳಕಂಡ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ಪಾವತಿಸಿ, ವೆಚ್ಚವನ್ನ ಬ್ಯಾಂಕ್ ಆಫ್ ಬರೋಡ, ಕುವೆಂಪುನಗರ, ಮೈಸೂರು ಇಲ್ಲಿರುವ ಎಸ್.ಎನ್.ಎ. ಖಾತೆಯಿಂದ ಭರಿಸಲು ಆದೇಶಿಸಿದೆ.

**ಷರತ್ತುಗಳು:**

1. ನಿಗಧಿತ ದಿನಾಂಕಗಳಂದು 02 ದಿನಗಳ ವಿಚಾರ ಸಂಕಿರಣ ಆಯೋಜಿಸಲು ಕ್ರಮ ಕೈಗೊಂಡು ವಿಚಾರ ಸಂಕಿರಣ ನಡೆಯುವ ಸ್ಥಳದ ಮಾಹಿತಿಯನ್ನು ಮತ್ತು ವಿಚಾರಸಂಕಿರಣದ ಸಂಪೂರ್ಣ ಮಾಹಿತಿಯನ್ನು ಈ ಕಚೇರಿಗೆ ಪೂರ್ವಭಾವಿಯಾಗಿ ಸಲ್ಲಿಸುವುದು.

-2-

2. ವಿಚಾರ ಸಂಕಿರಣ ಆಯೋಜಿಸಿದ ಒಂದು ವಾರದೊಳಗೆ ವಿಚಾರ ಸಂಕಿರಣದ ವರದಿ, ಛಾಯಾಚಿತ್ರಗಳು, ವೀಡಿಯೋ ಒಳಗೊಂಡಂತೆ ದಾಖಲೆಗಳನ್ನು ಈ ಕಚೇರಿಗೆ ಸಲ್ಲಿಸುವುದು.
3. ವಿಚಾರ ಸಂಕಿರಣ ಆಯೋಜಿಸಿದ ಒಂದು ವಾರದೊಳಗೆ ಅನುದಾನ ಬಳಕೆ ಪ್ರಮಾಣ ಪತ್ರವನ್ನು ಈ ಕಚೇರಿಗೆ ಸಲ್ಲಿಸುವುದು.

| Sl. No. | Name | Bank Name & Branch | Account No. | IFSC Code |
|---|---|---|---|---|
| 1 | Finance Officer<br>University of Mysore | SBI,<br>University Campus Br. | SB A/c No.<br>54007591437 | SBIN0040059 |

ನಿರ್ದೇಶಕರು,
ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ,
ಮೈಸೂರು.

**ಪ್ರತಿಗಳು:**

1. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರಿಗೆ ಮಾಹಿತಿಗಾಗಿ.
2. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರಿಗೆ ಮಾಹಿತಿಗಾಗಿ.
3. ಪ್ರೊ. ಮಾರುತಿ ಟಿ.ಆರ್., ಪ್ರಾಧ್ಯಾಪಕರು ಮತ್ತು ಮುಖ್ಯ ಸಂಶೋಧಕರು, ಕಾನೂನು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಮುಂದಿನ ಕ್ರಮಕ್ಕಾಗಿ.
4. ಕಛೇರಿ ಪ್ರತಿ.